ಕರ್ನಾಟಕ ಸರ್ಕಾರ

**ಸಾರ್ವಜನಿಕ ಶಿಕ್ಷಣ ಇಲಾಖೆ, ಆಯುಕ್ತರ ಕಛೇರಿ, ನೃಪತುಂಗ ರಸ್ತೆ, ಬೆಂಗಳೂರು-560001**

ಸಂಖ್ಯೆಎಡಿಎಂ.2[1]ಸ.ಉಡುಪು/2017-18 ದಿನಾಂಕ:28/07/2017

# ಸುತ್ತೋಲೆ

ವಿಷಯ: ಕರ್ನಾಟಕ ರಾಜ್ಯದ ಸರ್ಕಾರಿ, ಅನುದಾನಿತ, ಖಾಸಗಿ ಶಾಲೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಬೋಧಕ/ ಬೋಧಕೇತರ ಸಿಬ್ಬಂದಿಗಳು ಸಭ್ಯ ಉಡುಗೆಯನ್ನು ಧರಿಸುವ ಬಗ್ಗೆ.

* * * *

ಕರ್ನಾಟಕ ರಾಜ್ಯದ ಸರ್ಕಾರಿ, ಅನುದಾನಿತ, ಖಾಸಗಿ ಶಾಲೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಬೋಧಕ/ಬೋಧಕೇತರ ಸಿಬ್ಬಂದಿಗಳು ಸಭ್ಯ ಉಡುಗೆಯನ್ನು ಧರಿಸುವ ಹಿನ್ನೆಲೆಯಲ್ಲಿ ಯಾವುದೇ ವಸ್ತ್ರ ಸಂಹಿತೆಯ ಆದೇಶ ಇರುವುದಿಲ್ಲ. ಬೋಧಕ/ಬೋಧಕೇತರ ಸಿಬ್ಬಂದಿಗಳು ಸಭ್ಯ ಉಡುಗೆಯನ್ನು ಧರಿಸುವುದು ಅವರ ಸ್ವತಂತ್ರವಾಗಿರುತ್ತದೆ. ಅಲ್ಲದೇ ನಿರ್ದಿಷ್ಟ ಉಡುಗೆಯನ್ನು ತೊಡಲು ನಿರ್ದೇಶನ ನೀಡಿ ಅವರ ವೈಯಕ್ತಿಕ ಸ್ವಾತಂತ್ರ್ಯವನ್ನು ಕಸಿಯಲು ಸಾಧ್ಯವಿಲ್ಲ.

ಶಾಲೆಗಳಲ್ಲಿ ವಿದ್ಯಾರ್ಥಿ/ವಿದ್ಯಾರ್ಥಿನಿಯರು ವ್ಯಕ್ತಿತ್ವ ವಿಕಾಸಗೊಳಿಸಿ ಇವರ ಭವಿಷ್ಯವನ್ನು ರೂಪಸುವ ಹೊಣೆ ಶಿಕ್ಷಕರ ಮೇಲಿರುತ್ತದೆ. ಅಂತೆಯೇ, ಶಿಕ್ಷಕರ ನಡೆ-ನುಡಿ, ಆಚಾರ-ವಿಚಾರಗಳು, ಅಭಿವ್ಯಕ್ತಿ, ಉಡುಗೆ-ತೊಡುಗೆ ಹಾಗೂ ಒಟ್ಟಾರೆಯಾಗಿ ಶಿಕ್ಷಕರ ಸಂಪೂರ್ಣ ವ್ಯಕ್ತಿತ್ವ ವಿದ್ಯಾರ್ಥಿಗಳ ಮೇಲೆ ಪತ್ರ್ಯಕ್ಷವಾಗಿ ಹಾಗೂ ಪರೋಕ್ಷವಾಗಿ ಪ್ರಭಾವ ಬೀರುತ್ತದೆ. ಈ ಬಗ್ಗೆ ಶಿಕ್ಷಕರ ಶಿಕ್ಷಣದ ಸೇವಾ ಪೂರ್ವ ತರಬೇತಿ ಹಾಗೂ ಸೇವಾ ನಿರತ ತರಬೇತಿಗಳಲ್ಲಿ ಜಾಗೃತಗೊಳಿಸಲಾಗುತ್ತಿದೆ. ಈ ದಿಸೆಯಲ್ಲಿ ಸಭ್ಯ ಉಡುಪುಗಳನ್ನು ಧರಿಸುವ ವಿಷಯ, ಶಿಕ್ಷಕ-ಶಿಕ್ಷಕಿಯರುಗಳಲ್ಲಿ ಅಂತರ್ಗತವಾಗಿದೆ ಹಾಗೂ ಸಭ್ಯ ಉಡುಪುಗಳನ್ನು ಧರಿಸುವಲ್ಲಿ ಬೋಧಕ/ಬೋಧಕೇತರ ಸಿಬ್ಬಂದಿಗಳು ಸ್ವತಂತ್ರರಾಗಿರುತ್ತಾರೆ. ಅದರಂತೆ ಕ್ರಮ ವಹಿಸಲು ಉಪನಿರ್ದೇಶಕರು(ಆಡಳಿತ)ರವರುಗಳಿಗೆ ತಿಳಿಸಿದೆ.

(ಜಿ.ಕೆ. ಬಸವರಾಜ)
ನಿರ್ದೇಶಕರು(ಪ್ರಾಥಮಿಕ ಶಿಕ್ಷಣ)

ಇವರಿಗೆ,

1. ರಾಜ್ಯದ ಎಲ್ಲಾ ಉಪನಿರ್ದೇಶಕರು(ಆಡಳಿತ), ಸಾರ್ವಜನಿಕ ಶಿಕ್ಷಣ ಇಲಾಖೆರವರ ಸೂಕ್ತ ಕ್ರಮಕ್ಕಾಗಿ.
2. ರಾಜ್ಯದ ಎಲ್ಲಾ ಕ್ಷೇತ್ರ ಶಿಕ್ಷಣಾಧಿಕಾರಿಗಳು, ಸಾರ್ವಜನಿಕ ಶಿಕ್ಷಣ ಇಲಾಖೆರವರ ಸೂಕ್ತ ಕ್ರಮಕ್ಕಾಗಿ.
3. ಕಛೇರಿ ಪ್ರತಿ.